ರಾಜ್ಯದಲ್ಲಿರುವ ಔಟ್‌ಪೋಸ್ಟ್‌ಗಳ ಸಂಖ್ಯೆ

5052 - ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿರುವ ಔಟ್ ಪೋಸ್ಟ್‌ಗಳ ಸಂಖ್ಯೆ ಎಷ್ಟು?*
2. *ಪ್ರಸ್ತುತ ವರ್ಷ ಎಷ್ಟು ಔಟ್ ಪೋಸ್ಟ್‌ಗಳನ್ನು ಹೊಸದಾಗಿ ಆರಂಭಿಸಲು ನಿರ್ಧರಿಸಲಾಗಿದೆ?*
3. *ರೋಣ ತಾಲ್ಲೂಕಿನ ಹೊಳೆ ಆಲೂರ ಔಟ್ ಪೋಸ್ಟ್ ಮೇಲ್ದರ್ಜೆಗೆ ಏರಿಸಲು ಸರ್ಕಾರ ನಿರ್ಧರಿಸಿದೆಯೆ?*
4. *ರೋಣ ತಾಲ್ಲೂಕಿನ ಶಾಂತಗಿರಿ ಗ್ರಾಮದಲ್ಲಿ ಔಟ್ ಪೋಸ್ಟ್ ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1. ರಾಜ್ಯದಲ್ಲಿ ಒಟ್ಟು 296 ಪೋಲೀಸ್ ಹೊರ ಠಾಣೆಗಳಿವೆ.
2. ಯಾವುದೇ ಪ್ರಸ್ತಾವನೆ ಇಲ್ಲ.
3. ಯಾವುದೇ ಪ್ರಸ್ತಾವನೆ ಇಲ್ಲ.
4. ಯಾವುದೇ ಪ್ರಸ್ತಾವನೆ ಇಲ್ಲ.

ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಜಲವಿದ್ಯುತ್ ಯೋಜನೆಗಳು

5053 - ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಜಲವಿದ್ಯುತ್ ಯೋಜನೆಗಳನ್ನು ಅನುಷ್ಠಾನ ಮಾಡುವ ಯೋಜನೆಗಳು ಯಾವುವು?*

ಆ) *ಈ ಜಿಲ್ಲೆಯಲ್ಲಿ ಹೊಸದಾಗಿ ಜಲವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವವರು ಸರ್ಕಾರದವರೆ ಅಥವಾ ಖಾಸಗಿಯವರೆ?*

ಇ) *ಮುಳುಗಡೆಯಾಗಿರುವ ಗ್ರಾಮಗಳು ಮತ್ತು ಉತ್ಪಾದನೆಯಾಗುವ ವಿದ್ಯುತ್ತಿನ ಪ್ರಮಾಣವೆಷ್ಟು?*

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಕೆಳಕಂಡ ಜಲವಿದ್ಯುತ್ ಯೋಜನೆಗಳನ್ನು ಗುರುತಿಸಲಾಗಿದೆ.

1. ವರಾಹಿ ಟೇಲ್‌ರೇಸ್

2. ವರಾಹಿ ಭೂಗರ್ಭ, ವಿದ್ಯುತ್‌ಗಾರಕ್ಕೆ 3 ಮತ್ತು 4ನೇ ಘಟಕಗಳನ್ನು ಅನುಷ್ಠಾನಗೊಳಿಸುವುದು
3. ಸರಪಾಡಿ ಜಲವಿದ್ಯುತ್ ಯೋಜನೆ
4. ದೊಂಡೇಲ ಕಿರು ಜಲವಿದ್ಯುತ್ ಯೋಜನೆ
5. ಸೀತಾನದಿ ಕಿರು ಜಲವಿದ್ಯುತ್ ಯೋಜನೆ
6. ಎಳನೀರು ಕಿರು ಜಲವಿದ್ಯುತ್ ಯೋಜನೆ
7. ಪಯಸ್ವಿನಿ ಕಿರು ಜಲವಿದ್ಯುತ್ ಯೋಜನೆ
8. ಪರ್ಪಿಕಲಾ ಕಿರು ಜಲವಿದ್ಯುತ್ ಯೋಜನೆ

ಆ) ವರಾಹಿ 3ನೇ ಮತ್ತು 4ನೇ ಘಟಕಗಳು, ಸರಪಾಡಿ ಜಲವಿದ್ಯುತ್ ಯೋಜನೆಗಳನ್ನು ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದ ಅನುಷ್ಠಾನಗೊಳಿಸಲಾಗುವುದು. ಹಾಗೂ ಇತರೇ ಕಿರು ಜಲವಿದ್ಯುತ್ ಯೋಜನೆಗಳನ್ನು ಸರ್ಕಾರದ ಆದೇಶದಂತೆ ಖಾಸಗಿಯವರು ಅನುಷ್ಠಾನಗೊಳಿಸುವರು.

ಇ)

ಯೋಜನೆ	ಗ್ರಾಮಗಳು	ವಿದ್ಯುತ್ ಪ್ರಮಾಣ
1. ಸರಪಾಡಿ	7	215 ಮೆ. ಯೂನಿಟ್‌ಗಳು
2. ವರಾಹಿ 3 ಮತ್ತು 4 ಘಟಕಗಳು	ಇಲ್ಲ	ಒಟ್ಟು 4 ಘಟಕಗಳಿಂದ 1002 ಮೆ. ಯೂನಿಟ್‌ಗಳು.

ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪಕೇಂದ್ರದ ಬಗ್ಗೆ

5054 - ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ಔರಾದ್ ತಾಲ್ಲೂಕಿಗೆ ವಿದ್ಯುತ್ ಪೂರೈಕೆಯಾಗುತ್ತಿರುವುದರಿಂದ, ಇಡೀ ತಾಲ್ಲೂಕಿಗೆ ಅಸಮರ್ಪಕ ರೀತಿಯಲ್ಲಿ ವಿದ್ಯುಚ್ಛಕ್ತಿ ಪೂರೈಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲಾಖೆಯಲ್ಲಿ ಕಳೆದ 15 ವರ್ಷಗಳಿಂದಲೂ ವಿದ್ಯುಚ್ಛಕ್ತಿ ಪೂರೈಕೆಗಾಗಿ 110 ಕೆ.ವಿ. ಸಂತಪುರ ಸ್ಟೇಷನ್ ಮತ್ತು 33 ಕೆ.ವಿ. ಖೇಡ್ರಾ (ಬಿ) ಸ್ಟೇಷನ್ ಹಾಗೂ ಠಾಣಾ ಖಿಷನೂರ್ ಸ್ಟೇಷನ್‌ನನ್ನು ಔರಾದ್ ತಾಲ್ಲೂಕಿನಲ್ಲಿ ಸಮರ್ಪಕ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಶಿಫಾರಸ್ಸು ಮಾಡಿರುವುದು ನಿಜವಲ್ಲವೇ?

ಇ) ಹಾಗಿಲ್ಲದಿದ್ದರೆ, ಸರ್ಕಾರದ ಉದ್ದೇಶವೇನು?